ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 490/2018**

**Evidence through VC**

**ಫ್ರಾಸಾ- 9 ಚಾಸಾ-**

ಸಾಕ್ಷಿದಾರರ ಹೆಸರುಃ : ನರಸಿಂಹಯ್ಯ ಪಿ

ತಂದೆಯ ಹೆಸರುಃ : ಲೇಟ್ ಪರ್ವತಯ್ಯ

ವಯಸ್ಸುಃ : 63 ವರ್ಷ

ಉದ್ಯೋಗಃ : ನಿವೃತ್ತ ರಾಸಾಯನಿಕ ಪರೀಕ್ಷಕರು

ವಾಸ : ಬೆಂಗಳೂರು

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 19-12-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಮೇ 2015 ರಿಂದ ಜುಲೈ 2018ರವರೆಗೆ ಸಾರ್ವಜನಿಕ ಆರೋಗ್ಯ ಸಂಸ್ಥೆ ಬೆಂಗಳೂರಿನಲ್ಲಿ ರಾಸಾಯನಿಕ ಪರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿಃ 4-4-17ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರು ಎಸಿಬಿ ಕಛೇರಿಯ ಪೊಲೀಸ್ ಅಧೀಕ್ಷಕರು ಮೊಕದ್ದಮೆ ಸಂಖ್ಯೆ 10/17ಕ್ಕೆ ಸಂಬಂಧಿಸಿದಂತೆ ಸೀಲು ಮಾಡಿದ ಒಟ್ಟು 12 ವಸ್ತುಗಳನ್ನು ಮತ್ತು ಮಾದರಿ ಸೀಲನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಕಳುಹಿಸಿಕೊಟ್ಟಿದ್ದರು. ಅದನ್ನು ನಾನು ಸ್ವೀಕರಿಸಿ ವಿಶ್ಲೇನಿಷಣೆಗೊಳಪಡಿಸಿರುತ್ತೇನೆ. ಆ ವಸ್ತುಗಳಲ್ಲಿ ಕ್ರಮಸಂಖ್ಯೆ 3, 6, 7, 9 ಮತ್ತು 10ರಲ್ಲಿ ಫಿನಾಫ್ತಲಿನ್ ಮತ್ತು ಸೋಡಿಯಂ ಕಾರ್ಬೋನೇಟ್ ಅಂಶ ಇರುವುದು ಕಂಡುಬಂತು. ಕ್ರಮಸಂಖ್ಯೆ 1 ಮತ್ತು 11 ರ ವಸ್ತುವಿನಲ್ಲಿ ಫಿನಾಫ್ತಲಿನ್ ಪುಡಿ ಅಂಶ ಇತ್ತು. ಕ್ರಮಸಂಖ್ಯೆ 2, 5, 8 ಮತ್ತು 12 ರ ವಸ್ತುಗಳಲ್ಲಿ ಸೋಡಿಯಂ ಕಾರ್ಬೋನೇಟ್ ಅಂಶ ಇತ್ತು.

ಕ್ರಮಸಂಖ್ಯೆ 13 ರಲ್ಲಿ ಸೋಡಿಯಂ ಕಾರ್ಬೊನೇಟ್ ಅಥವಾ ಫಿನಾಫ್ತಲಿನ್ ಅಂಶ ಇರುವುದು ಕಂಡುಬರಲಿಲ್ಲ. ಕ್ರಮಸಂಖ್ಯೆ 11 ರಲ್ಲಿ ಕಾಣಿಸಿದ ನೋಟುಗಳ ಕ್ರಮಸಂಖ್ಯೆ ನಂಬರ್ ಮತ್ತು ಮುಖಬೆಲೆ ಟ್ರ್ಯಾಪ್ ಸಮಯದಲ್ಲಿ ವಶಪಡಿಸಿಕೊಂಡ ಕರೆನ್ಸಿ ನೋಟುಗಳ ಕ್ರಮಸಂಖ್ಯೆ ನಂಬರ್ ಮತ್ತು ಮುಖಬೆಲೆಗೆ ಹೋಲಿಕೆಯಾಗುತ್ತಿತ್ತು. ಎಲ್ಲಾ ವಸ್ತುಗಳ ಮೇಲೆ ಇದ್ದ ಸೀಲು ಸುಸ್ಥಿತಿಯಲ್ಲಿತ್ತು. ಎಲ್ಲಾ ವಸ್ತುಗಳನ್ನು ನಾನೇ ತೆರೆದು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿರುತ್ತೇನೆ. ಈ ಎಲ್ಲಾ ವಿಚಾರವನ್ನು ನಮೂದಿಸಿ ನನ್ನ ಅಭಿಪ್ರಾಯವರದಿಯನ್ನು ತನಿಖಾಧಿಕಾರಿಗೆ ದಿನಾಂಕ 6-4-17ರ ಪತ್ರದೊಂದಿಗೆ ಕಳುಹಿಸಿರುತ್ತೇನೆ. ಈಗ ಸದರಿ ವರದಿ ನೋಡುತ್ತಿದ್ದು ಅದನ್ನು ನಿಪಿ-48 ಎಂದು ಸಾಕ್ಷಿಯ ರುಜುವನ್ನು ನಿಪಿ-48(ಎ) ಎಂದು ಗುರುತಿಸಲಾಯಿತು. ಸದರಿ ವಸ್ತುಗಳನ್ನು ರಾಸಾಯನಿಕ ವಿಶ್ಲೇಷಣೆ ಮುಗಿದ ನಂತರ ಮತ್ತೆ ಪ್ಯಾಕು ಮಾಡಿ ಸೀಲು ಮಾಡಿ ಮಾದರಿ ಸೀಲಿನೊಂದಿಗೆ ವಾಪಸ್ ಎಸಿಬಿ ಕಛೇರಿಗೆ ಕಳುಹಿಸಿರುತ್ತೇನೆ. ಮಾದರಿ ಸೀಲನ್ನು ನಿಪಿ-48ರಲ್ಲಿ ಲಗತ್ತಿಸಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ನಿಪಿ-48(1) ಎಂದು ಗುರುತಿಸಲಾಯಿತು. ನನಗೆ ವಿಶ್ಲೇಷಣೆಗೆ ಕಳುಹಿಸಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ.

(ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಿದ ಎಲ್ಲಾ ವಸ್ತುಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸದೇ ಇರುವುದರಿಂದ ವಿಶೇಷ ಅಭಿಯೋಜಕರ ಕೋರಿಕೆ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**